ಓ ಎಸ ನಂ. **79/2018**
ಪಿಡಬ್ಲೂ-**1 (** ಈಶ್ವರಮ್ಮ **)**

<u>ಇಂದು ದಿನಾಂಕಃ **26-07-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಂದುವರಿದ ಪಾಟೀ ಸವಾಲುಃ ಶ್ರೀ ವಿ.ಜೆ.ಎಮ್ ವಕೀಲರಿಂದ **(1** ರಿಂದ **4** ನೇ ಪ್ರತಿವಾದಿ ಪರ **)**</u>

ನಮ್ಮ ತಂದೆಯವರು ಮರಣ ಹೊಂದುವವರೆಗೂ ನನ್ನ ತಂದೆ ಮಾತ್ರ ಮನೆ ಮತ್ತು ಹೊಲಗಳ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು ಎಂದರೆ ನನ್ನ ತಂದೆ ಹೇಳಿದಂತೆ ನನ್ನ ಅಣ್ಣನವರು ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ನನ್ನ ತಂದೆಯ ಸಹಿಯನ್ನು ನಾನು ಗುರುತಿಸುತ್ತೇನೆ. ಸಾಕ್ಷಿಗೆ ದಿನಾಂಕಃ 15-02-2018 ರ ಮರಣ ಶಾಸನವನ್ನು ತೋರಿಸಲಾಗಿ, ಅದರಲ್ಲಿ ನನ್ನ ತಂದೆ ಸಹಿ ಮಾಡಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾಖಲೆಗಳನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ನನ್ನ ತಂದೆಯವರಾದ ಚಂದ್ರಪ್ಪನವರು ಸಹಿ ಮಾಡಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯವರ ಸೇವೆಯನ್ನು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1, 2 ಮತ್ತು 4 ನೇ ಪ್ರತಿವಾದಿಗಳು ಸೇಡಂನಲ್ಲಿ ವಾಸವಾಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಸ್ವಂತ ಗಳಿಸಿದ ಆಸ್ತಿಗಳಲ್ಲಿ ನಮಗೆ ಪಾಲು ಇಲ್ಲ ಎಂದರೆ ಸರಿಯಲ್ಲ. ಮರಣ ಶಾಸನದ ಪ್ರಕಾರ ನನ್ನ ತಂದೆಯವರ ಆಸ್ತಿಗಳು ಅವರ ಮೊಮ್ಮಗನಾದ ರೋಹಿತ ರೆಡ್ಡಿಗೆ ಹೋಗುತ್ತವೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ಇಲ್ಲದೇ ಇದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಮರಣ ಹೊಂದುವವರೆಗೂ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ, ಸೇಡಂ.